ಈ ಕಾಲದ ಜೆನ್‌ಝೀ ಪೀಳಿಗೆಯನ್ನು ಬಹುವಾಗಿ ಸೆಳೆಯುವ ಇಂಡೀ ಸಂಗೀತ ಜನಪ್ರಿಯವಾಗುತ್ತಿದೆ. ಕನಸು ಕಂಗಳ ಯುವ ಗಾಯಕರು ಯಾವುದೇ ಚೌಕಟ್ಟುಗಳಿಗೆ ಒಳಪಡದ 'ಸ್ವತಂತ್ರ ಸಂಗೀತ'ದ ಬೆನ್ನು ಹತ್ತಿದ್ದಾರೆ. ಈ ಹಾಡುಗಳನ್ನು ಇತರರು ಮದುವೆ ಸಮಾರಂಭ, ಚಾರಣ ಹೋಗುವಾಗ, ಪಾರ್ಟಿಗಳಲ್ಲಿ ಹುಚ್ಚೆದ್ದು ಕುಣಿಯುವ ಸಂದರ್ಭಗಳಲ್ಲಿ ರೀಲ್ಸ್ ಮಾಡುವ ಉದ್ದೇಶಗಳಿಗೆ ಬಳಸಿಕೊಂಡು ಮತ್ತಷ್ಟು ಪ್ರಚಾರ ಮಾಡುತ್ತಿರುವುದು ಪ್ರಸ್ತುತ ಸಂಗೀತದ ವಿದ್ಯಮಾನ. ಹಾಗಾದರೆ ಏನೀ 'ಇಂಡೀ ಸಂಗೀತ'? ಕನ್ನಡದಲ್ಲಿ ಬೆರಳೆಣಿಕೆಯಷ್ಟು ಇರುವ ಇಂಡೀ ಕಲಾವಿದರ ಅನಿಸಿಕೆಗಳೇನು? ಬೇರೆ ಭಾಷೆಗಳಲ್ಲಿ ಇಂಡೀ ಸಂಗೀತ ಎಷ್ಟು ವಿಜೃಂಭಿಸುತ್ತಿದೆ ಎಂಬೆಲ್ಲ ವಿಚಾರದ ಸುತ್ತ ಗಿರಕಿ ಹೊಡೆಯುವ ಈ ಬರಹ, ಹೊಸ ಬಗೆಯ ಸಂಗೀತದ ಬಗ್ಗೆ ಸಮಗ್ರ ಮಾಹಿತಿ ಒದಗಿಸಿದ್ದು ಈ ವಾರದ ಸುಧಾ ವಿಶೇಷ.



ನಾರಾಯಣ ಶರ್ಮ